ದಿವಾಣಿ ನ್ಯಾಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಿತ್ತೂರ.

ದಿನಾಂಕಃ 03.07.2026 ರಂದು ಡಿ.ಡಬ್ಲ್ಯೂ-1ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎಮ್ ಎಸ್ ಎಚ್ ವಕೀಲರಿಂದಃ**

1. ನಾನು ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವೆಯ ಬಗ್ಗೆ ಮಾಹಿತಿ ಇದೆ. ಪ್ರತಿವಾದ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ನನ್ನ ಅಜ್ಜನ ಕಾಲದಿಂದ ಇರುವ ಆಸ್ತಿಗಳ ಬಗ್ಗೆ ಮಾಹಿತಿ ಇಲ್ಲ. ನನ್ನ ತಂದೆಯ ಕಾಲದಿಂದ ಇರುವ ಆಸ್ತಿಗಳ ಬಗ್ಗೆ ಮಾಹಿತಿ ಇದೆ. ನನ್ನ ಅಜ್ಜ ಅಂದರೆ ಬಸಪ್ಪನ ಊರು ತುರುಮುರಿ. ಸದರಿಯವರ ಹೆಸರಿನಲ್ಲಿ ಮನೆ ಹೊಲಗಳು ಇದ್ದವು ಎಂದರೆ ಸರಿ. ಸದರಿಯವರ ಮನೆ ಮುಳುಗಡೆಯಾಗಿರುತ್ತದೆ ಎಂದರೆ ಸರಿ. ಸದರಿಯವರ ಜೀವಿತ ಕಾಲದಲ್ಲಿ ನನ್ನ ತಂದೆ ಸದರಿ ಊರಿನಲ್ಲಿರುವ ಜಮೀನನ್ನು ಮಾರಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಊರಿನಲ್ಲಿದ್ದ ಜಮೀನನ್ನು ಮಾರಿ ರಿ ಸ ಸಂಖ್ಯೆ 85/8 ನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ದನಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಖರೀದಿ ಮಾಡಿರುತ್ತಾರೆ. ಸದರಿ ಸಮಯದಲ್ಲಿ ನನ್ನ ತಂದೆ ಮತ್ತು ವಾದಿಯವರ ತಂದೆ ಕೂಡಿ ಇರುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-23 ರಲ್ಲಿ ನನ್ನ ತಂದೆ ಮತ್ತು ವಾದಿಯವರ ತಂದೆಯ ಹೆಸರು ಇದೆ ಎಂದರೆ ಸರಿ. ಸದರಿಯರಿಬ್ಬರೂ ಸೇರಿ ಖರೀದಿ ಮಾಡಿದ ಕಾರಣ ಸದರಿ ನಿಪಿ-23 ರಲ್ಲಿ

ಜಂಟಿಯಾಗಿ ಹೆಸರು ನಮೂದು ಆಗಿದೆ ಎಂದರೆ ಸರಿಯಲ್ಲ.

2. ಸದರಿ ಜಮೀನು ಹೊರತು ಪಡಿಸಿ ವಾದಿಯ ತಂದೆಯ ಹೆಸರಿನಲ್ಲಿ ಬೇರೆ ಜಮೀನು ಇಲ್ಲ. ನನ್ನ ಅಜ್ಜನಿಗೆ ಇಬ್ಬರೂ ಗಂಡುಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಇದ್ದಾರೆ. ನನ್ನ ತಂದೆ ಮತ್ತು ಸದರಿ ವಾದಿಯವರ ತಂದೆ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ.

3. ನನ್ನ ತಂದೆ ನಾಗಪ್ಪಾ ರಾಯಪ್ಪಾ ಮಕದಾರರವರಿಂದ 19 ನೇ ವಯಸ್ಸಿನಲ್ಲಿ ಒಂದು ಖಾಲಿ ಜಾಗೆಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ವಾದಿಯವರ ತಂದೆ ಅಪ್ರಾಪ್ತ ವಯಸ್ಕನಾಗಿದ್ದ ಎಂದರೆ ಸರಿ. ಸದರಿಯವರ ತಂದೆ 1966 ರಲ್ಲಿ ಅಪ್ರಾಪ್ತ ವಯಸ್ಕನಾದ ಕಾರಣ ಸದರಿ ಆಸ್ತಿಯನ್ನು ನನ್ನ ತಂದೆಯ ಹೆಸರಿನಲ್ಲಿ ಖರೀದಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಮ್ಮ ಮನೆಯಲ್ಲಿ ಅವಿಭಕ್ತ ಕುಟುಂಬ ಇತ್ತು, ಆದಕಾರಣ ನನ್ನ ತಂದೆ ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

4. ಸದರಿ ಆಸ್ತಿ ಮುಳುಗಡೆಯಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಬದಲು ಸರ್ಕಾರ ಆಸ್ತಿ ಸಂಖ್ಯೆ 220/ಬ ವಿಸ್ತೀರ್ಣ 25X80 ಅಡಿ 1971 ರಲ್ಲಿ ನೀಡಲಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿ ವಾದಿಯರ ಸ್ವಾಧೀನದಲ್ಲಿದೆ ಎಂದರೆ ಸರಿ, ಸದರಿ ಮನೆಯನ್ನು ನಾವೇ ಕಟ್ಟಿಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಯವರು 12.5X80

ಅಡಿ ಜಾಗೆಯಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯ ವಿದ್ಯುಚ್ಛಕ್ತಿ ವೆಚ್ಚವನ್ನು ವಾದಿಯವರೇ ತುಂಬುತ್ತಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಾವು ವಾಸ ಮಾಡುತ್ತಿಲ್ಲ, ಬೇರೆ ಆಸ್ತಿಯಲ್ಲಿದ್ದೇವೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ನಾವು ಶೆಡ್ಡ ಹಾಕಿರುತ್ತೇವೆ ಎಂದು ನುಡಿಯತ್ತಾರೆ.

(**ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**).

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕಿತ್ತೂರ.